# ನಿಮ್ಮೊಡನೆ

## ಹೆಣ್ಣು ಮಗು ಉಳಿಸಿ...

ಹೆಣ್ಣು ಮಗುವಿನ ಜನನವನ್ನು ಸಂಭ್ರಮಾಚರಣೆಯನ್ನಾಗಿಸುವ ಮನಸ್ಥಿತಿಯನ್ನು ಸಮಾಜದಲ್ಲಿ ಮೂಡಿಸುವಂತಹ ಆಂದೋಲನ ರಾಷ್ಟ್ರವ್ಯಾಪಿಯಾಗಬೇಕು.

‘ಹೆಣ್ಣು ಮಗು ಉಳಿಸಿ ಮತ್ತು ಪರಿಸರ ಉಳಿಸಿ’.ಇದು ಪಂಜಾಬ್‌ನಲ್ಲಿ ಚಾಲ್ತಿಯಲ್ಲಿರುವ ಪ್ರಚಾರ ಆಂದೋಲನ. ಹೆಣ್ಣು ಮಗು ಜನಿಸಿದಾಗಲೆಲ್ಲಾ ಗಿಡವೊಂದನ್ನು ನೆಡಲು ಈ ಆಂದೋಲನ ಕರೆ ನೀಡುತ್ತದೆ. 2008ರಲ್ಲಿ ಆರಂಭವಾದ ಈ ಆಂದೋಲನವನ್ನು ಹುಟ್ಟು ಹಾಕಿರುವವರು ಪಂಜಾಬ್‌ನ ಅಕಾಲಿ ದಳದ ಸಂಸತ್ ಸದಸ್ಯೆ ಹಾಗೂ ಪಂಜಾಬ್ ಉಪ ಮುಖ್ಯಮಂತ್ರಿ ಸುಖಬೀರ್ ಬಾದಲ್ ಅವರ ಪತ್ನಿ ಹರ್ಸಿಮ್ರತ್ ಕೌರ್ ಬಾದಲ್.

ಕೃಷಿ ರಂಗದಲ್ಲಾದ ‘ಹಸಿರು ಕ್ರಾಂತಿ’ ಪಂಜಾಬ್‌ಗೆ ಶ್ರೀಮಂತಿಕೆ ಹಾಗೂ ಸಮೃದ್ಧಿ ತಂದಿದ್ದೇನೊ ನಿಜ. ಆದರೆ ಹೆಣ್ಣುಮಕ್ಕಳ ಸಂಖ್ಯೆ ಕುಸಿಯುತ್ತಾ ಸಾಗಿತು. ರಾಷ್ಟ್ರದಲ್ಲಿ ಮೂವತ್ತು ವರ್ಷಗಳಿಗೂ ಹಿಂದೆ ಮೊದಲ ಲಿಂಗ ಆಯ್ಕೆ ಕ್ಲಿನಿಕ್ ಆರಂಭವಾದದ್ದೇ ಅಮೃತಸರದಲ್ಲಿ ಎಂಬುದನ್ನು ನಾವಿಂದು ನೆನಪಿಸಿಕೊಳ್ಳಬೇಕು. ನಂತರದ ಕಥೆ ಎಲ್ಲರಿಗೂ ತಿಳಿದದ್ದೆ. ವರ್ಷ ವರ್ಷ ಅಲ್ಲಿ ಹೆಣ್ಣುಮಕ್ಕಳ ಸಂಖ್ಯೆ ಕ್ಷೀಣವಾಗತೊಡಗಿತು. ನಂತರ ರಾಷ್ಟ್ರದಲ್ಲೇ ಅತ್ಯಂತ ಕಡಿಮೆ ಹೆಣ್ಣುಮಕ್ಕಳಿರುವ ರಾಜ್ಯ ಪಂಜಾಬ್ ಎಂಬಂತಹ ಆತಂಕಕಾರಿ ವಾಸ್ತವವನ್ನು 2001ರ ಜನಗಣತಿಯ ಅಂಕಿ ಅಂಶಗಳು ಸಾರಿ ಹೇಳಿದವು. ಈ ಪ್ರಕಾರ, 0–6 ವಯೋಮಾನದ ಮಕ್ಕಳ ಗುಂಪಿನಲ್ಲಿ ಹೆಣ್ಣುಮಕ್ಕಳ ಅನುಪಾತ 793ಕ್ಕೆ ಅಲ್ಲಿ ಕುಸಿದಿತ್ತು. ಈ ಹಿನ್ನೆಲೆಯಲ್ಲೇ ಹೆಣ್ಣುಮಗುವಿನ ಜನನವನ್ನು ಸಂಭ್ರಮಾಚರಣೆಯನ್ನಾಗಿಸುವ ಮನಸ್ಥಿತಿಯನ್ನು ಸಮಾಜದಲ್ಲಿ ಮೂಡಿಸುವಂತಹ ಈ ಆಂದೋಲನ ವಿಶಿಷ್ಟ ಎನ್ನಬಹುದು.

‘ಹೆಣ್ಣು ಮಗು ಉಳಿಸಿ ಮತ್ತು ಪರಿಸರ ಉಳಿಸಿ’ (ನನ್ಹೀ ಚಾನ್) ಎಂಬಂತಹ ಈ ಆಂದೋಲನ ಹೆಣ್ಣು ಮತ್ತು ಪರಿಸರದ ಅವಿನಾಭಾವ ಸಂಬಂಧವನ್ನೂ ಒತ್ತಿ ಹೇಳುತ್ತದೆ. ಪ್ರಕೃತಿ ಅಥವಾ ಪರಿಸರ ಭುವಿಯನ್ನು ಪೊರೆಯುತ್ತದೆ. ಹೆಣ್ಣು ಕುಟುಂಬವನ್ನು ಪೊರೆಯುತ್ತಾಳೆ. ‘ಹೆಣ್ಣುಮಗುವೇ ಇಲ್ಲದಾದಾಗ ಕುಟುಂಬದ ಪರಿಕಲ್ಪನೆಯ ಸ್ಥಿತಿ ಏನಾಗಬಹುದು? ಇದು ಸಮಾಜ, ರಾಷ್ಟ್ರವನ್ನು ನಾಶಪಡಿಸುತ್ತದೆ. ಮನೆಗಳಲ್ಲಿ ಸಂತಸದ ಹೊನಲು ಮಾಯವಾಗುತ್ತದೆ. ಆಗ ಬದುಕಲ್ಲಿ ಪ್ರೀತಿ ಸಂತಸ ಇರದು’ ಎಂದು ರಾಷ್ಟ್ರಪತಿ ಪ್ರತಿಭಾ ಪಾಟೀಲ್ ಇದೇ ಸಂದರ್ಭದಲ್ಲಿ ಎಚ್ಚರಿಸಿದ್ದಾರೆ. ಹೆಣ್ಣು ಮಗು ಉಳಿಸುವ ಹಾಗೂ ಪರಿಸರ ಸಂರಕ್ಷಿಸುವಂತಹ ಈ ಆಂದೋಲನ ರಾಷ್ಟ್ರವ್ಯಾಪಿಯಾಗಬೇಕೆಂಬ ರಾಷ್ಟ್ರಪತಿಯವರ ಆಶಯ ಸೂಕ್ತವಾದದ್ದೇ.

ನಮ್ಮ ಕರ್ನಾಟಕದ ಸ್ಥಿತಿಯನ್ನೇ ನೋಡಿ. 0–6 ವಯೋಮಾನದ ಗಂಡು–ಹೆಣ್ಣುಮಕ್ಕಳ ಅನುಪಾತ 1991ರಲ್ಲಿ 1000 ಗಂಡುಮಕ್ಕಳಿಗೆ 960 ಹೆಣ್ಣಮಕ್ಕಳು ಇದ್ದದ್ದು 2001ರ ಜನಗಣತಿ ವೇಳೆಗೆ 946ಕ್ಕೆ ಕುಸಿದಿದೆ. ರಾಜ್ಯದ ಈ ಸರಾಸರಿ ಅನುಪಾತ 946ಕ್ಕಿಂತಲೂ ಕಡಿಮೆ ಪ್ರಮಾಣದ ಹೆಣ್ಣುಮಕ್ಕಳಿರುವ ಜಿಲ್ಲೆಗಳ ಸಂಖ್ಯೆ 11. ಇವುಗಳಲ್ಲಿ ಬೆಂಗಳೂರು ಗ್ರಾಮೀಣ (942) ಹಾಗೂ ಬೆಂಗಳೂರು ನಗರ (943) ಸಹ ಸೇರಿವೆ. ಅತ್ಯಂತ ಕಡಿಮೆ ಗಂಡು–ಹೆಣ್ಣುಮಕ್ಕಳ ಅನುಪಾತ ಇರುವ ಜಿಲ್ಲೆ ಬೆಳಗಾವಿ (921). ನಂತರ ಬಿಜಾಪುರ(928). ಮೂರನೆ ಸ್ಥಾನ ಮಂಡ್ಯಕ್ಕೆ (934).

ವೈದ್ಯಕೀಯ ತಂತ್ರಜ್ಞಾನದ ಸುಧಾರಣೆ ಹೆಣ್ಣುಮಕ್ಕಳಿಗೆ ಶಾಪವಾಗಿ ಪರಿಣಮಿಸಿರುವುದೇ ನಮ್ಮ ಸಮಾಜದ ವಿಪರ್ಯಾಸ. ಇದರಿಂದಾಗಿ ಪ್ರತಿವರ್ಷ ಸುಮಾರು 9 ಲಕ್ಷ ಹೆಣ್ಣು ಭ್ರೂಣ ಹತ್ಯೆಗಳಾಗುತ್ತಿವೆ ಎಂಬುದು ಒಂದು ಅಂದಾಜು. ನಾಝಿಗಳು ಕೊಂದ ಯಹೂದಿಗಳ ಪ್ರಮಾಣಕ್ಕಿಂತ ಹೆಚ್ಚಿನ ಸಂಖ್ಯೆಯಲ್ಲಿ ಭ್ರೂಣಾವಸ್ಥೆಯಲ್ಲೇ ಹೆಣ್ಣುಮಕ್ಕಳ ಹತ್ಯಾಕಾಂಡ ನಡೆಸುತ್ತಿದ್ದೇವೆ ಎಂದು ಈ ಸಮಸ್ಯೆಯ ತೀವ್ರತೆ ಬಗ್ಗೆ ಬೆಳಕು ಚೆಲ್ಲುತ್ತಾರೆ ಹೆಣ್ಣು ಭ್ರೂಣ ಹತ್ಯೆ ವಿರುದ್ಧ ನಿರಂತರ ಹೋರಾಟ ಹಾಗೂ ಸಂಶೋಧನೆಯಲ್ಲಿ ತೊಡಗಿಕೊಂಡಿರುವ ಸಾಬು ಜಾರ್ಜ್. ಈ ಆಧುನಿಕ ಕಾಲದಲ್ಲೂ ‘ಮಾಣಿಕದಂಥ ಮಗ’ನನ್ನೇ ಬಯಸುತ್ತಾ ‘ಹೆಣ್ಣು ಹುಟ್ಟಿದರೆ ಹುಣ್ಣು’ ಎನ್ನುವಂಥ ಸಮಾಜದ ಮನೋಭಾವ ಬದಲಿಸಲಾದರೂ ಹೆಣ್ಣುಮಗುವಿನ ಜನನವನ್ನು ಸಿಹಿ ಹಂಚಿ, ಗಿಡ ನೆಟ್ಟು ಆಚರಿಸುವಂತಹ ಸಂಭ್ರಮವಾಗಿಸುವ ದಿಸೆಯಲ್ಲಿ ಸಮಾಜ ಕಾರ್ಯಪ್ರವೃತ್ತವಾಗಬೇಕಿದೆ.

■ ಸಿ. ಜಿ. ಮಂಜುಳಾ

